10. ಸುಭಾಷ್ ಚಂದ್ರ, ಐಪಿಎಸ್
11. ಬಿ.ಇ. ಉಮಾಪತಿ, ಐಪಿಎಸ್

ಆ) ಶ್ರೀ. ಎಂ. ಶಂಕರನಾರಾಯಣನ್, ಐಎಎಸ್ ಮತ್ತು ಶ್ರೀ. ಎಂ. ಮದನಗೋಪಾಲ್, ಐಎಎಸ್. ಇವರ ಪ್ರಕರಣಗಳನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಿ ಶಿಸ್ತಿನ ಕ್ರಮವನ್ನು ಮುಂದುವರಿಸುವ ಅಗತ್ಯವಿಲ್ಲವೆಂದು ನಿರ್ಧಾರ ಕೈಗೊಂಡಿದೆ.

ಶ್ರೀ. ರಿಚರ್ಡ್ ಕ್ರಾಸ್ಟಾ, ಐಎಎಸ್. ಇವರ ಪ್ರಕರಣದಲ್ಲಿ ಇವರು ಗೈರು ಹಾಜರಾದ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಯಿತು. ಅವರು ರಾಜೀನಾಮೆ ನೀಡಿದ್ದರಿಂದ ಮುಂದಿನ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ. ತಂಗರಾಜ್, ಐಎಎಸ್‌ರವರು ಕರ್ನಾಟಕ ಭೂಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ಇವರಿಗೆ ಜಮೀನು ಮಂಜೂರು ಮಾಡಿದ್ದರಿಂದ ಅವರಿಗೆ ಎಚ್ಚರಿಕೆ ನೀಡಲಾಗಿದ್ದು ಮತ್ತು ಶ್ರೀ. ಕೆ.ಎಸ್.ಎನ್. ಚಿಕ್ಕೆರೂರು, ಐಪಿಎಸ್, ಇವರು ಲೋಕಾಯುಕ್ತ ಕಛೇರಿಯಿಂದ ವರ್ಗಾವಣೆಯಾದಾಗ ಕಡತಗಳನ್ನು ಹಿಂದಿರುಗಿಸದಿದ್ದ ಕಾರಣ, ಇವರ ಸಾಬೀತಾದ ಆರೋಪಗಳ ಮೇರೆಗೆ ಒಂದು ವೇತನ ಬಡ್ತಿಯನ್ನು ತಡೆ ಹಿಡಿದು ಶಿಕ್ಷಿಸಲಾಯಿತು.

ಶ್ರೀ. ಪಿ.ಜಿ. ನಾಯ್ಕ, ಐಎಎಸ್, ಶ್ರೀ.ಬಿ.ಕೆ.ಡಿ. ನೇಗಿ, ಐಎಎಸ್, ಶ್ರೀ. ಭಾಟಿಯಾ, ಐಎಎಸ್, ಶ್ರೀ. ಸುಭಾಷ ಚಂದ್ರ, ಐಪಿಎಸ್, ಮತ್ತು ಶ್ರೀ. ಬಿ.ಇ. ಉಮಾಪತಿ, ಐಪಿಎಸ್, ಇವರ ಪ್ರಕರಣಗಳು ಬೇರೆ ಬೇರೆ ಹಂತಗಳಲ್ಲಿವೆ. ಮತ್ತು ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಶ್ರೀ. ಕೌಶಿಕ್ ಮುಖರ್ಜಿ, ಐಎಎಸ್, ಇವರ ಪ್ರಕರಣವು ಭಾರತ ಸರ್ಕಾರದಲ್ಲಿ ಬಾಕಿ ಇರುತ್ತದೆ.

ರೇಷ್ಮೆ ಹುಳುಗಳಿಗೆ ಗಂಟು ರೋಗ.

79 (248) ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಹುಳುಗಳಿಗೆ ವ್ಯಾಪಕವಾಗಿ "ಗಂಟುರೋಗ" ಬಂದು ಇದರಿಂದ ರಾಜ್ಯದ ಅತಿ ದೊಡ್ಡ ಉದ್ಯಮದ ಪ್ರಗತಿ ಕುಂಠಿತವಾಗಿರುವುದು ಹಾಗೂ ರಾಜ್ಯದಲ್ಲಿ ರೇಷ್ಮೆ ಗೂಡಿನ ಉತ್ಪತ್ತಿ ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ರೇಷ್ಮೆ ಗೂಡಿನ ಉತ್ಪತ್ತಿ ಎಷ್ಟು ಕಡಿಮೆಯಾಗಿದೆ;

ಇ) ಈ ರೋಗ ವ್ಯಾಪಕವಾಗಿ ಹರಡದಂತೆ ನಿಯಂತ್ರಣ ಮಾಡುವಲ್ಲಿ ಇಲಾಖೆ ವಿಫಲವಾಗಲು ಕಾರಣವೇನು;

ಈ) ಈ ರೋಗವನ್ನು ನಿಯಂತ್ರಣ ಮಾಡಿ ರೈತರಿಗೆ ರೋಗರಹಿತ ರೇಷ್ಮೆ ಮೊಟ್ಟೆ ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) 1992–93ನೇ ಸಾಲಿನಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ಕುಂಠಿತವಾಗಿಲ್ಲ. ಅದು ಕಳೆದ ಎರಡು ವರ್ಷಗಳ ಇದೇ ಅವಧಿಯಲ್ಲಿನ ಉತ್ಪಾದನೆಗಿಂತ ಏರಿಕೆಯಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಇಲಾಖೆಯು ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಂಡದ್ದರಿಂದ ರೋಗ ನಿಯಂತ್ರಣದಲ್ಲಿದೆ. ರೋಗ ತಡೆಗಟ್ಟಲು ಹತೋಟಿ ಕ್ರಮಗಳನ್ನು ತೀವ್ರ ರೀತಿಯಲ್ಲಿ ಕೈಗೊಳ್ಳಲಾಗಿದೆ.

ಈ) ಗಂಟು ರೋಗವು ನಿಯಂತ್ರಣದಲ್ಲಿದೆ ಮತ್ತು ರೈತರಿಗೆ ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ಒದಗಿಸಲಾಗುತ್ತಿದೆ.

ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು

80(279) ಶ್ರೀ. ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

ಆ) ಇವುಗಳ ಪೈಕಿ ಲಾಭಗಳಿಸಿರುವ ಮತ್ತು ನಷ್ಟ ಅನುಭವಿಸಿರುವವು ಎಷ್ಟು;

ಇ) ನಿರಂತರವಾಗಿ ನಷ್ಟ ಅನುಭವಿಸುತ್ತಿರುವ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವ ಪ್ರಸ್ತಾವನೆ ಇದೆಯೆ;

ಈ) ಇವುಗಳನ್ನು ವ್ಯಾಪಾರದಲ್ಲಿ ಕಾರ್ಯಸ್ವಮ್ಯ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ಅರವತ್ತೆಂಟು ಸಾರ್ವಜನಿಕ ಉದ್ದಿಮೆಗಳು ಇವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಒಟ್ಟು ಅರವತ್ತೆಂಟು (68) ಸಾರ್ವಜನಿಕ ಉದ್ದಿಮೆಗಳಲ್ಲಿ ನಲವತ್ತೊಂದು ಸಾರ್ವಜನಿಕ ಉದ್ದಿಮೆಗಳಿಂದ 1991–92 ಸಾಲಿನ ಮಾಹಿತಿ ಸ್ವೀಕರಿಸಲ್ಪಟ್ಟಿದೆ. ಇವುಗಳ ಪೈಕಿ 28 ಸಾರ್ವಜನಿಕ ಉದ್ದಿಮೆಗಳು ಲಾಭಗಳಿಸಿವೆ ಮತ್ತು 17 ಸಾರ್ವಜನಿಕ ಉದ್ದಿಮೆಗಳು ನಷ್ಟ ಅನುಭವಿಸಿವೆ. ಉಳಿದ 23 ಸಾರ್ವಜನಿಕ ಉದ್ದಿಮೆಗಳಿಂದ ಮಾಹಿತಿ ಬಂದಿರುವುದಿಲ್ಲ.

ಇ) ಹಿಂದಿನ ಸಚಿವ ಸಂಪುಟ ಈ ಕೆಳಕಂಡ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲು ತೀರ್ಮಾನಿಸಿದೆ:–

1) ಕಿಮ್ಕೋ
2) ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್
3) ಕರ್ನಾಟಕ ರಾಜ್ಯ ಒಳನಾಡು ಮೀನು ಅಭಿವೃದ್ಧಿ ನಿಗಮ
4) ಕರ್ನಾಟಕ ಪಲ್ಪ ವುಡ್ ಲಿಮಿಟೆಡ್

ಈ) ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಒಂದೇ ತರಹದ ಉದ್ದಿಮೆಗಳ ವಿಲೀನೀಕರಣ ಮತ್ತು ಮಿಶ್ರಣ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.